ವರ್ಷಗಳಿರಬೇಕು. ಮಗ ಸತ್ತರೂ ಅವರು ಕೈಬಿಟ್ಟಿಲ್ಲ. ಇನ್ನೂ ಮಕ್ಕಳಾಗಿಲ್ಲ. ಸಂಪನ್ನ ಭಕ್ತರು. ಆ ವಿಧವೆಗೆ ನೀನು ಪುನಃ ಬಾಳ್ವೆ ಕೊಡತಿಯೇನು? ಯೋಚಿಸು. ಅವಸರ ಮಾಡಾದು ಬ್ಯಾಡ' ಅಂದರು. 'ನಿಮ್ಮ ಸಮ್ಮತಿ ಸಾಕು' ಎಂದ ಫಲವಾಗಿ ಚಂದ್ರಕಾಂತಯ್ಯನ ಮಡದಿಯಾಗಿ ಮಾಂತಮ್ಮ ಮನೆಗೆ ಬಂದಿದ್ದಳು...

* * *

'ಹೊಲ್ಕ ಹೋಗಿ ಬರ್ತೀನಿ. ಬುತ್ತಿ ಕಟ್ಟಿಕೊಂಡೀನಿ. 'ರೊಟ್ಟಿ ತಿನ್ನು ಬಾಯ್ಯ' ಅಂತ ಕರದ್ರೂ ಹಾಂ ಇಲ್ಲ ಹೂಂ ಇಲ್ಲ. ಗಪ್ಪನೆ ಕುಂತಿದ್ದಿ. ಎಲ್ಲ ಅಡುಗೆ ಐತೆ ಉಂಡ್ರೀ' ಅಂದಳು. ಇಷ್ಟು ಹೊತ್ತು ಎಂದೂ ಕೂತ ಜೀವ ಅಲ್ಲ ಇದು! ನಾನು ಬರೆದ ವಚನದಿಂದ ಆಘಾತವಾಯ್ತೋ ಏನೋ! ಅಂದುಕೊಂಡಳು ಮಾಂತಮ್ಮ.

'ಹೊಲ್ಕ ಹೋಗಿ ಬಾ. ನಾನೂ ಬಂದ್ರೆ ಬಂದೇನು ನೀನು ಮುಂದ ನಡಿ' ಎಂದು ಕಳಿಸಿದ. ಮಾಂತಮ್ಮ ತಲಬಾಗಿಲ ಹೊಸ್ತಿಲು ದಾಟಿ ನಿಂತು, ಬಂಕದಲ್ಲಿದ್ದ ಕಪ್ಪು ಹಲಿಗೆ ನೋಡಿದಳು. ತಾನೇ ಬರೆದ ಮೊಟ್ಟ ಮೊದಲ ವಚನ ಹಾಗೇಯಿತ್ತು. ಬಟ್ಟೆಯಿಂದ ವರೆಸಿ ಹೋಗಲೇನು? ಎಂದು ತಲೆಮ್ಯಾಲೆ ಬುತ್ತಿ ಹೊತ್ತೇ ನಿಂತಿದ್ದಳು...



'ದೊಡ್ಡಮ್ಮಾ, ದೊಡ್ಡಪ್ಪ ಮನ್ಯಾಗ ಐದಾನೇನು?' ಎಂದು ಶಿವಲಿಂಗ ಬಂದು ನಗುಮುಖದಿಂದ ಕೇಳಿ ನಿಂತ.

'ಅಯ್ಯಾ ಶಿವ, ಬಾ ಬಾ! ಒಳಗ ಕುಂತಾನ. ಯಾಕ ಮೆತ್ತಗಾನ. ಚೂರು ಮಾತಾಡ್ಸು. ನಾನು ಹೊಲಕ್ಕ ಹೋಗಿಬರ್ತೀನಿ' ಎಂದು ಹೊರಟಳು.

ಶಿವಲಿಂಗನ ಗಮನ ಕಪ್ಪುಹಲಿಗೆ ಮ್ಯಾಲಿತ್ತು! ಮಾಂತಮ್ಮ ಹೇಳಿದ್ದರ ಕಡೆಗಿರಲಿಲ್ಲ. ಓದಿದ ಶಿವಲಿಂಗ 'ದೊಡ್ಡಪ್ಪ ಈ ವಚನ ಬರದಾನಂದ್ರ...' ಎಂದು ಬೇಸರ ಮಾಡಿಕೊಂಡೇ 'ದೊಡ್ಡಪ್ಪಾ.....' ಎಂದು ಒಳ ಬಂದ. ಚಂದ್ರಕಾಂತಯ್ಯ ಸಾಕಿದ ಹುಡುಗ ಶಿವಲಿಂಗ! ಕರೆದು ಚಾಪೆ ಮ್ಯಾಲೆ ಕೂಡಿಸಿ ತಲೆಮ್ಯಾಲೆ ಕೈಯಾಡಿಸಿದ.

ಈಗ್ಗ ಆರೇಳು ವರ್ಷಗಳ ಹಿಂದಿನಿಂದ, ಚಂದ್ರಕಾಂತಯ್ಯ ಮಠದ ವ್ಯವಹಾರಗಳಿಂದ ಹೊರಬಂದ ಮ್ಯಾಲೆ ಶಿವಲಿಂಗ ಸಣ್ಣವರಿಗೆ ಹೆದರಿ ಇತ್ತ ಬರುತ್ತಿರಲಿಲ್ಲ. ಸಣ್ಣವರೇ ಹೋಗಿ ಬರ್ರಿ ಎಂದು ಏನಾದ್ರೂ ಕೆಲಸ ಹೇಳಿದ್ರೆ ಬರ್ತಿದ್ದ. ಇಲ್ಲ ಮಠದಲ್ಲಿ ನಡೆಯುತ್ತಿದ್ದ ಅಹಿತಕರ ಸಂಗತಿಗಳಿದ್ದರೆ ಚಂದ್ರಕಾಂತಯ್ಯನಿಗೆ ತಿಳಿಸಲು ಸಲುವೊತ್ತು ಬಂದು ಹೋಗುತ್ತಿದ್ದರು ಶಿವಲಿಂಗ, ಶಿವರುದ್ರಯ್ಯರು.

'ದೊಡ್ಡಪ್ಪ, ನಿನ್ನೇನೇ ಬಂದು ಹೇಳ್ಬೇಕಿತ್ತು. ಪುರುಸೊತ್ತು ಸಿಗಲಿಲ್ಲ. ಇವತ್ತ ಸಂಜೆ ಕಡೆ ಮಠದಾಗ ಸಭೆ ನಡಿತದಂತ. ಸೂತ್ತಲೂರಿನ ಮಠಾಧೀಶರು ಸಭೆಗೆ ಬರ್ತ್ತಾರಂತೆ. ಪತ್ರಕರ್ತರೂ ಬರ್ತ್ತಾರಂತೆ. ಶಿವಗೀತಾಳನ್ನ ಅವರಪ್ಪ ಕೊಂದನಲ್ಲ ಅದರ ಸಂಬಂಧ, 'ನಾವು ಅಂತರಜಾತಿ ಮದುವೆಗಳಿಗೆ ವಿರೋಧಿಗಳಲ್ಲ. ನಮ್ಮದು ಬಸವ ಪರಂಪರೆ ಮಠ. ಜಾತಿ, ಲಿಂಗ ತಾರತಮ್ಯ ಮಾಡಡಿಲ್ಲ...' ಎಂದು ಭಾಷಣ ಮಾಡಿ, ಪತ್ರಿಕೆ ಮೂಲಕ ಜನ್ರಿಗೆ ತಿಳಿಸ್ತಾರಂತ. ಈ ಸಭೆಗೆ ಊರುಕೇರಿ ಮಂದಿ ಬರ್ತಿದ್ದಾರೆ. ನೀನೂ ಬರಬೇಕಂತ... ಬಾ' ಎಂದು ಶಿವಲಿಂಗ ಹೇಳುವುದನ್ನು ಅನ್ಯಮನಸ್ಕನಾಗಿ ಚಂದ್ರಕಾಂತಯ್ಯ ಕೇಳಿದ. ಮೇಲಾಗಿ ಮುಂಜಾನೆನೂ ಶಿವರುದ್ರಯ್ಯನು ಹೇಳಿದ್ದನ್ನು ಕೇಳಿದ್ದ.

'ಬೇಸದಿಯಿಲ್ಲ? ನಿನ್ನ ಕೆಲ್ಸ ನೀನು ಮಾಡ್ಕಂಡಿರು ಸಾಕು. ಸಣ್ಣವರ ಕೆಲಸ ಕಾರ್ಯಗಳ ಬಗ್ಗೆ ಟೀಕೆ ಮಾಡಿಕೊಂಡು ಇರಬ್ಯಾಡ. ಮಠ ಸಾಕಾದ್ರ ಈ ಮನಿಗೆ ಬಾ' ಎಂದು ತಲೆಮ್ಯಾಲೆ ಕೈಯಾಡಿಸಿದ.

ಶಿವಲಿಂಗನಿಗೆ ಈಗ ಹದಿನೈದು ವಯಸ್ಸು. ದೊಡ್ಡವರ ಹಿಂದೆ ಪ್ರವಚನಕ್ಕೆ ಹೋದಾಗ ಆ ಊರಲ್ಲಿ ಚಂದ್ರಕಾಂತಯ್ಯನಿಗೆ ಶಿವಲಿಂಗ ಸಿಕ್ಕ. ಅಲ್ಲಿಯೂ ಮಠದಲ್ಲೇ ಇದ್ದ ಹುಡುಗ ಮೂರು